# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-5185/2013/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 10/03/2017
13

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಬಾಬು ಕಮಲಾಕ್ಷ ನಾಯಕ್ ಬಿನ್ ಶೇಷಗಿರಿ ನಾಯಕ್ ಮತ್ತು ಶ್ರೀಮತಿ ಸರೋಜ ಬಾಯ್ ಕೋಂ ಶ್ರೀ ಬಾಬು ಕಮಲಾಕ್ಷ ನಾಯಕ್ ಮದ್ದುಗುಡ್ಡೆ, ಕುಂದಾಪುರ ಕಸಬಾ ಗ್ರಾಮ, ಕುಂದಾಪುರ ತಾಲ್ಲೂಕು ಇವರುಗಳು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರುಗಳಾದ ಶ್ರೀ ಬಾಬು ಕಮಲಾಕ್ಷ ನಾಯ್ಕ ಹಾಗೂ ಅವರ ಪತ್ನಿ ಶ್ರೀಮತಿ ಸರೋಜ ಬಾಯ್ ಇವರುಗಳು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ದೂರುದಾರರಿಗೆ ಕುಂದಾಪುರ ಕಸಬ ಗ್ರಾಮದಲ್ಲಿ ಸರ್ವೇ ನಂ.205/1ಬಿ ಯಲ್ಲಿ 0.10 ಎಕರೆ ಜಮೀನಿದ್ದು, ಸದರಿ ಸ್ಥಿರಾಸ್ತಿಗೆ ಹೊಂದಿಕೊಂಡಂತೆ ದಕ್ಷಿಣದಲ್ಲಿ ಶ್ರೀ ಲಕ್ಷ್ಮಣ ಮೇಸ್ತ್ರ ಎಂಬುವವರಿಗೆ ಸೇರಿದ ಸರ್ವೇ ನಂ.205/10ಎ ಯ 0.15 ಎಕರೆ ಸ್ಥಿರಾಸ್ತಿ ಇರುತ್ತದೆ. ಸದರಿ ಸ್ಥಿರಾಸ್ತಿಗಳ ಪೂರ್ವ ದಿಕ್ಕಿನಲ್ಲಿ ಕುಂದಾಪುರ ಪುರಸಭೆಯವರು ದೂರುದಾರರಿಂದ ಹಾಗೂ ಸದರಿ ಶ್ರೀ ಲಕ್ಷ್ಮಣ ಮೇಸ್ತ ಇವರಿಂದ ಕಾನ್ವೆಂಟ್ ರಸ್ತೆ ನಿರ್ಮಾಣಕ್ಕಾಗಿ ಸ್ವಲ್ಪ ಜಾಗವನ್ನು ಸ್ವಾಧೀನಪಡಿಸಿಕೊಂಡಿದ್ದು, ಸ್ವಾಧೀನಾನಂತರ ದೂರುದಾರರ ಸ್ವಾಧೀನದಲ್ಲಿ 0.08.50 ಎಕರೆ ಮತ್ತು ಶ್ರೀ ಲಕ್ಷ್ಮಣ ಮೇಸ್ತ ಇವರ ಸ್ವಾಧೀನತೆಯಲ್ಲಿ 0.13.50 ಎಕರೆ ಉಳಿದಿರುತ್ತದೆ. ದೂರುದಾರರು ಮತ್ತು ಶ್ರೀ ಲಕ್ಷ್ಮಣ ಮೇಸ್ತರ ನಡುವೆ ಮೊದಲಿನಿಂದಲೂ ಜಮೀನಿನ ಗಡಿ ತಕರಾರು ಇರುತ್ತದೆ. ಆದರೆ, ಸದರಿ ಭೂಸ್ವಾಧೀನತೆ ಆದ ನಂತರ ದೂರುದಾರರಿಗೆ ಸೇರಿದ ಜಮೀನಿನ ಪಹಣಿಯಲ್ಲಿ 0.01.50 ಎಕರೆಯನ್ನು ಕಡಿತಗೊಳಿಸಿ ಆರ್‌ಟಿಸಿಯಲ್ಲಿ ಉಳಿಕೆ ಜಮೀನಿನ ವಿಸ್ತೀರ್ಣವನ್ನು ನಮೂದು ಮಾಡಬೇಕಾಗಿದ್ದು, ಹಾಗೆಯೇ ಶ್ರೀ ಲಕ್ಷ್ಮಣ ಮೇಸ್ತರವರ ಜಮೀನಿನ ಆರ್‌ಟಿಸಿ ಯಲ್ಲಿ 0.02 ಎಕರೆ ಜಮೀನನ್ನು ಕಡಿತಗೊಳಿಸಿ ಉಳಿಕೆ ಜಮೀನಿನ ಬಗ್ಗೆ ನಮೂದಿಸಬೇಕಾಗಿದ್ದು, ಹಾಗೆ ನಮೂದಿಸದೇ ಆರ್‌ಟಿಸಿ ಯಲ್ಲಿ 0.02 ಎಕರೆ ಜಮೀನನ್ನು ಅಕ್ರಮವಾಗಿ

ಕಡಿತಗೊಳಿಸಿ ಉಳಿಕೆ ಸ್ಥಳವನ್ನು ಅಂದರೆ 0.08 ಎಕರೆ ಎಂದು ಆಕಾರಬಂದ್ ದುರಸ್ಥಿ ಮಾಡಿರುತ್ತಾರೆ ಮತ್ತು ಶ್ರೀ ಲಕ್ಷ್ಮಣ ಮೇಸ್ತರ ಸ್ಥಳದ ಪಹಣಿಯನ್ನು 0.15 ಎಕರೆ ಎಂಬುದನ್ನು ಉಳಿಸಿ 0.15 ಎಕರೆಗೆ ಪ್ಲಾಟಿಂಗ್ ಮಾಡಿದ ನಂತರ ದೂರುದಾರರ ಹಕ್ಕಿನ ಸ್ಥಳವನ್ನು ಅಕ್ರಮವಾಗಿ ಶ್ರೀ ಲಕ್ಷ್ಮಣ ಮೇಸ್ತರ ಸ್ವಾಧೀನದಲ್ಲಿದೆ ಎಂದು ಎಬಿಸಿ ಸರ್ವೆ ಮೂಲಕ ಸಂಬಂಧಪಟ್ಟ ಸರ್ವೆಯರ್ ತೋರಿಸಿಕೊಟ್ಟಿರುತ್ತಾರೆ. ಇದಾದ ನಂತರ ಸದರಿ ತಪ್ಪುಗಳನ್ನು ಸರಿಪಡಿಸುವಂತೆ ಉಪವಿಭಾಗಾಧಿಕಾರಿಯವರಿಗೆ ತಮ್ಮ ಅರ್ಜಿಯನ್ನು ನೀಡಿ ಕೋರಿಕೊಂಡಿದ್ದು, ಉಪವಿಭಾಗಾಧಿಕಾರಿಗಳು ದೂರುದಾರರ ಅರ್ಜಿಯನ್ನು ತಹಶೀಲ್ದಾರ್‌ರವರಿಗೆ ವರ್ಗಾಯಿಸಿರುತ್ತಾರೆ. ತಹಶೀಲ್ದಾರ್‌ರವರು ತನಿಖೆಗೆ ಆದೇಶಿಸಿದಂತೆ ಗ್ರಾಮಲೆಕ್ಕಿಗರು ಮತ್ತು ರಾಜಸ್ವಾ ನಿರೀಕ್ಷಕರು ವರದಿ ಸಲ್ಲಿಸಿ ಜಮೀನಿನ ಸರ್ವೆಗೆ ತಿಳಿಸಿರುತ್ತಾರೆ. ಹಲವಾರು ಬಾರಿ ಈ ಬಗ್ಗೆ ಕಛೇರಿಗೆ ಅಲೆದಾಡಿ ತಮ್ಮ ಅರ್ಜಿಯ ಬಗ್ಗೆ ಇತ್ಯರ್ಥ ಪಡಿಸಬೇಕೆಂದು ಕೋರಿಕೊಂಡಿದ್ದರೂ, ಎದುರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಹಾಗೂ ತಮಗೆ ನ್ಯಾಯಕೊಡಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ 2ನೇ ಎದುರುದಾರರಾದ ತಹಶೀಲ್ದಾರ್, ಕುಂದಾಪುರ ಇವರಿಗೆ ದೂರುದಾರರ ಅರ್ಜಿಯ ಮೇಲೆ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸಲು ಕೋರಲಾಗಿದ್ದು, ಸದರಿಯವರು ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ದೂರುದಾರರು ಕುಂದಾಪುರ ಗ್ರಾಮದ ಸರ್ವೆ ನಂಬರ್ 205/9ಬಿ ಯ 0.14 ಎಕರೆ ವಿಸ್ತೀರ್ಣದ ಜಾಗಕ್ಕೆ ಹದ್ದುಬಸ್ತು ಅಳತೆ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಶ್ರೀ ಅನಂತ ಬಿಲ್ಲವ, ಭೂಮಾಪಕರು ಇವರಿಗೆ ಅಳತೆಗೆ ನೀಡಲಾಗಿರುತ್ತದೆ. ಸದರಿ ಭೂಮಾಪಕರು ದಿ:3/8/2013 ರಂದು ದೂರುದಾರರು ಹಾಗೂ ಸಂಬಂಧಪಟ್ಟವರಿಗೆ ತಿಳುವಳಿಕೆ ನೀಡಿ ಅಳತೆ ಕಾರ್ಯವನ್ನು ದಿ:16/08/2013 ಕ್ಕೆ ನಿಗದಿಗೊಳಿಸಿದ್ದು, ನಿಗಧಿಗೊಳಿಸಿದ ದಿನಾಂಕದಂದು ಅಳತೆ ಮಾಡಿ ಕೆಲಸ ಪೂರೈಸಿದ್ದು, ಅಳತೆಯ ವರದಿಯನ್ನು ತಹಶೀಲ್ದಾರ್ ಕಛೇರಿಗೆ ಸಲ್ಲಿಸಿರುತ್ತಾರೆ.

3. ಸದರಿ ವರದಿಯ ಆಧಾರದ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ ತಹಶೀಲ್ದಾರ್ ವರದಿಯಲ್ಲಿ ಸರ್ವೆ ನಂಬರ್ 205/9ಬಿ ಗೆ ಸಂಬಂಧಿಸಿದ್ದಾಗಿರುತ್ತದೆ. ಆದರೆ, ತಾನು ಅರ್ಜಿಯನ್ನು ಸರ್ವೆನಂಬರ್ 205/10ಬಿ ಗೆ ಸಂಬಂಧಿಸಿದ

ಜಮೀನನ್ನು ಅಳತೆ ಮಾಡುವ ಬಗ್ಗೆ ಕೋರಿದ್ದು, ಈ ಬಗ್ಗೆ ಅಳತೆ ಮಾಡಿರುವುದಿಲ್ಲ. ಆದ್ದರಿಂದ, ಸದರಿ ಅಂಶಗಳನ್ನು ಪರಿಶೀಲಿಸಿ ತನಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ.

4. ದೂರುದಾರರು ಸಲ್ಲಿಸಿದ್ದ ಪ್ರತ್ಯುತ್ತರದ ಆಧಾರದ ಮೇಲೆ, ಕುಂದಾಪುರ ತಹಶೀಲ್ದಾರ್‌ರವರಿಂದ ದೂರಿಗೆ ಸಂಬಂಧಿಸಿದಂತೆ ಕೂಡಲೇ ಕ್ರಮ ಜರುಗಿಸಿ ವರದಿ ಸಲ್ಲಿಸಲು ತಿಳಿಸಲಾಗಿರುತ್ತದೆ. ಆದರೆ, ಸದರಿ ತಹಶೀಲ್ದಾರ್‌ರವರು ಈ ಹಿಂದೆ ಸಲ್ಲಿಸಿದ್ದ ವರದಿಯನ್ನೇ ಸಲ್ಲಿಸಿರುತ್ತಾರೆ. ಆದ್ದರಿಂದ, ಈ ಕಡತವನ್ನು ಗೌರವಾನ್ವಿತರ ಉಡುಪಿ ಪ್ರವಾಸದ ಕಾಲದಲ್ಲಿ ಗೌರವಾನ್ವಿತರ ಆದೇಶದಂತೆ ಮಂಡಿಸಲಾಗಿದ್ದು, ಗೌರವಾನ್ವಿತ ಉಪಲೋಕಾಯುಕ್ತರು ದೂರಿನ ವಿಷಯದ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ತಹಶೀಲ್ದಾರ್‌ರವರಿಗೆ ತಿಳಿಸಿದ್ದು, ಅದರಂತೆ, ತಹಶೀಲ್ದಾರ್, ಕುಂದಾಪುರ ರವರು ಒಂದು ಪತ್ರವನ್ನು ಸಲ್ಲಸಿರುತ್ತಾರೆ. ಸದರಿ ಪತ್ರದಲ್ಲಿ ಗೌರವಾನ್ವಿತರು ಉಡುಪಿ ಜಿಲ್ಲಾ ಪ್ರವಾಸದ ಕಾಲದಲ್ಲಿ ದೂರಿನ ವಿಚಾರಣೆಯನ್ನು ಕೈಗೊಂಡ ಸಮಯದಲ್ಲಿ ತಾನು ಕುಂದಾಪುರ ತಾಲ್ಲೂಕಿನ ತಹಶೀಲ್ದಾರ್‌ನಾಗಿ ಕೆಲಸ ನಿರ್ವಹಿಸುತ್ತಿರಲಿಲ್ಲ. ಅಲ್ಲದೇ, ದಿ:10/12/2010 ರಿಂದ 01/07/2011 ರವರೆಗೆ ಕೆಲಸ ನಿರ್ವಹಿಸುತ್ತಿದ್ದು, ದಿ:05/06/2014 ರಂದು ಶ್ರೀಮತಿ ಗಾಯತ್ರಿ ನಾಯ್ಕ ರವರು ತಹಶೀಲ್ದಾರ್‌ರಾಗಿದ್ದರು, ಆದ್ದರಿಂದ, ತನಗೆ ಗೌರವಾನ್ವಿತರಿಂದ ನಿರ್ದೇಶನವಿರಲಿಲ್ಲವೆಂದು ತಿಳಿಸಿರುತ್ತಾರೆ.

5. ಪ್ರಕರಣದ ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ವರದಿಯನ್ನು ಹಾಗೂ ದೂರುದಾರರ ಪ್ರತ್ಯುತ್ತರವನ್ನು ಪರಿಶೀಲಿಸಿದಲ್ಲಿ, ದೂರುದಾರರು ತಮ್ಮ ದೂರಿನಲ್ಲಿ ಕುಂದಾಪುರ ಕಸಬಾ ಗ್ರಾಮದ ಸರ್ವೇ ನಂಬರ್ 205/1ಬಿ ಯಲ್ಲಿ 0.10 ಎಕರೆ ತಮ್ಮ ಹೆಸರಿನಲ್ಲಿ ಸ್ಥಿರಾಸ್ತಿ ಇದ್ದು, ಸದರಿ ಆಸ್ತಿಯ ಪೂರ್ವ ದಿಕ್ಕಿಗೆ ಕುಂದಾಪುರ ಪುರಸಭೆಯವರು 0.01.50 ಎಕರೆ ಸ್ಥಳವನ್ನು ಕಾನ್ವೆಂಟ್ ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದು, ಸದರಿ ರಸ್ತೆಗೆ ಭೂಸ್ವಾಧೀನವಾದ ನಂತರ ತಮ್ಮ ಸ್ವಾಧೀನದಲ್ಲಿ 0.08.50 ಎಕರೆ ಜಮೀನಿರಬೇಕಾಗಿದ್ದು, ತಮ್ಮ ಜಾಗದಲ್ಲಿ 2 ಸೆಂಟ್ಸ್ ಜಮೀನನ್ನು ತೆಗೆದು 0.08 ಸೆಂಟ್ಸ್ ಜಾಗಕ್ಕೆ ಮಾತ್ರ ಆಕಾರಬಂದ್ ದುರಸ್ಥಿ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ತಮ್ಮ ಪಕ್ಕದ ಜಮೀನಿನವರಾದ ಶ್ರೀ ಲಕ್ಷ್ಮಣ ಮೇಸ್ತ ಇವರ ಸ್ವಾಧೀನದಲ್ಲಿ ಸರ್ವೆ ನಂ.205/10ಎ ಯ 0.15 ಎಕರೆ ಜಮೀನಿದ್ದು, ಸದರಿ ಸ್ಥಿರಾಸ್ತಿಗೆ ಪೂರ್ವದಲ್ಲಿ ಪುರಸಭೆಯವರು 0.01.50 ಎಕರೆ ಸ್ಥಳವನ್ನು ಕಾನ್ವೆಂಟ್ ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದು, ಅವರ ಹೆಸರಿಗೆ 0.13.50 ಎಕರೆ ಉಳಿದಿರಬೇಕಾಗಿರುತ್ತದೆ. ಆದರೆ, ಸದರಿ ಶ್ರೀ ಲಕ್ಷ್ಮಣ ಮೇಸ್ತರ ಇವರಿಗೆ ಪಹಣಿಯನ್ನು ಅಕ್ರಮವಾಗಿ

ದುರಸ್ಥಿ ಮಾಡಿ 0.15 ಎಕರೆಗೆ ಪ್ಲಾಟಿಂಗ್ ಮಾಡಿ ದೂರುದಾರರ ಹಕ್ಕಿನ ಸ್ಥಳವನ್ನು ಅವರಿಗೆ ತೋರಿಸಿ ದುರಸ್ಥಿಗೊಳಿಸಿರುತ್ತಾರೆ. ಆದ್ದರಿಂದ, ಸದರಿ ಅಳತೆಗಳನ್ನು ಸರಿಪಡಿಸಿಕೊಡಬೇಕೆಂದು ಕೋರಿರುತ್ತಾರೆ.

6. ಕುಂದಾಪುರ ತಾಲ್ಲೂಕು, ಕಸಬ ಗ್ರಾಮದ ಸರ್ವೇ ನಂಬರ್ 205/10ಬಿ ಗೆ ಸಂಬಂಧಿಸಿದಂತೆ 0.10 ಎಕರೆಗೆ ಹಾಗೂ ಸರ್ವೇ ನಂ.205/10ಎ ಯ 0.15 ಎಕರೆಗೆ ಸಂಬಂಧಿಸಿದಂತೆ ತಹಶೀಲ್ದಾರ್, ಕುಂದಾಪುರ ರವರಿಗೆ ಸಹಾಯಕ ಕಮೀಷನರ್, ಕುಂದಾಪುರ ಉಪವಿಭಾಗ ಇವರು ಪತ್ರ ಬರೆದು ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ಈ ಪತ್ರದಲ್ಲಿ ತಿಳಿಸಿರುವ ಸರ್ವೇ ನಂಬರ್‌ಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ತಮ್ಮ ಫಾರಂ ನಂ.1ರಲ್ಲಿ ನೀಡಿರುವ ಸರ್ವೇ ನಂಬರ್ ತಪ್ಪೆಂದು ಕಂಡು ಬರುತ್ತದೆ. ದೂರುದಾರರು ಫಾರಂ ನಂ.1 ರಲ್ಲಿ ತಮ್ಮ ಜಮೀನಿನ ಸರ್ವೇ ನಂಬರ್ 205/1ಬಿ ಎಂದು ನಮೂದಿಸಿರುತ್ತಾರೆ. ಆದರೆ, ಸಹಾಯಕ ಕಮೀಷನರ್, ಕುಂದಾಪುರ ಉಪವಿಭಾಗ, ಇವರ ಪತ್ರದಲ್ಲಿ 205/10ಬಿ ಎಂದು ನಮೂದಿಸಿರುವುದು ಕಂಡುಬರುತ್ತದೆ. ಆನಂತರದ ಪತ್ರ ವ್ಯವಹಾರಗಳಲ್ಲಿ ದೂರುದಾರರು ತಮ್ಮ ಜಮೀನಿನ ಸರ್ವೇ ನಂಬರ್ ಅನ್ನು 205/10ಬಿ ಎಂದು ನಮೂದಿಸಿರುವುದು ಕಂಡು ಬರುತ್ತದೆ. ಆದ್ದರಿಂದ, ಜಮೀನಿನ ವಿಸ್ತೀರ್ಣ ಹಾಗೂ ಸರ್ವೇ ನಂಬರ್‌ಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ಸರ್ವೇ ನಂಬರ್ 205/10ಬಿ ಗೆ ಸಂಬಂಧಿಸಿದಂತೆ ದೂರು ನೀಡಿರುವುದು ಕಂಡು ಬರುತ್ತದೆ. ಆದರೆ, ಕುಂದಾಪುರ ತಹಶೀಲ್ದಾರ್‌ರವರು ಮೇಲೆ ತಿಳಿಸಿದ ವರದಿಯಲ್ಲಿ 205/9ಬಿ ಗೆ ಸಂಬಂಧಿಸಿದಂತೆ ವರದಿ ನೀಡಿರುವುದು ಕಂಡು ಬಂದಿರುತ್ತದೆ. (ಸದರಿ ವರದಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ). ಕುಂದಾಪುರ ತಹಶೀಲ್ದಾರ್‌ರವರು ತಮ್ಮ ವರದಿಯೊಡನೆ ಭೂಮಾಪಕರ ವರದಿಯ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಿದಲ್ಲಿ ಸರ್ವೇ ನಂಬರ್ 205/9ಬಿರ ಜಮೀನಿಗೆ ಸಂಬಂಧಿಸಿದಂತೆ ಸದರಿ ಭೂಮಾಪಕರು ಅಳತೆ ಮಾಡಿ ವರದಿ ಸಲ್ಲಿಸಿರುವುದು ಕಂಡು ಬರುತ್ತದೆ. ಹಾಗೂ ಅದೇ ಸರ್ವೇ ನಂಬರ್‌ಗೆ ನಕಾಶೆಯನ್ನು ಸಹ ಅಳವಡಿಸಿರುತ್ತಾರೆ. (ಸದರಿ ನಕಾಶೆಯ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ಸರ್ವೇ ನಂಬರ್‌ಗೆ ಸಂಬಂಧಿಸಿದಂತೆ ದೂರುದಾರರ ಹೇಳಿಕೆಯನ್ನು ಮಾಡಿಕೊಂಡಿದ್ದು, ಅದನ್ನು ಹಾಜರುಪಡಿಸಲಾಗಿದೆ. ಸದರಿ ಹೇಳಿಕೆಯಲ್ಲಿ ದೂರುದಾರರು ಸರ್ವೇ ನಂ.205/9ಬಿ ಯ ಗಡಿಗುರುತು ತೋರಿಸಿಕೊಡುವ ಬಗ್ಗೆ ತಾನು ಅರ್ಜಿ ಮಾಡಿಕೊಂಡಿರುವುದಾಗಿ ತಿಳಿಸಿರುವುದು ಕಂಡು ಬರುತ್ತದೆ. ಸದರಿ ಅರ್ಜಿಗೆ ದೂರುದಾರರು ಸಹಿ ಮಾಡಿರುತ್ತಾರೆ. ಸದರಿ ಸರ್ವೇ ನಂ.205/9ಬಿ ಗೆ ಸಂಬಂಧಿಸಿದಂತೆ ಅಳತೆ ಮಾಡುವ ಪೂರ್ವದಲ್ಲಿ ನೋಟೀಸನ್ನು ದೂರುದಾರರಿಗೆ ಮತ್ತು ಸದರಿ ಜಮೀನಿನ ಬಾಜುದಾರರಿಗೆ ನೀಡಿರುವುದು ಕಂಡು ಬರುತ್ತದೆ (ಸದರಿ ನೋಟೀಸ್‌ನ ಹಾಜರುಪಡಿಸಲಾಗಿದೆ). ಸದರಿ ನೋಟಿಸ್‌ನ ಪ್ರತಿಯನ್ನು

ಪರಿಶೀಲಿಸಿದಲ್ಲಿ ಸರ್ವೇ ಕಾರ್ಯವನ್ನು ಕುಂದಾಪುರ ಕಸಬ ಗ್ರಾಮದ ಸರ್ವೇ ನಂಬರ್:205/9ಬಿ ಜಮೀನಿನ ಅಳತೆಗೆ ನೋಟೀಸ್ ಕೊಟ್ಟಿರುವುದಾಗಿ ಕಂಡು ಬರುತ್ತದೆ. (ದೂರುದಾರರು ಹದ್ದುಬಸ್ತು ಕೋರಿ ಸಲ್ಲಿಸಿರುವ ಅರ್ಜಿಯನ್ನು ಹಾಜರುಪಡಿಸಲಾಗಿದೆ). ಸದರಿ ಅರ್ಜಿಯನ್ನು ಪರಿಶೀಲಿಸಿದಲ್ಲಿ ದೂರುದಾರರು ಕುಂದಾಪುರ ಕಸಬ ಗ್ರಾಮದ ಸರ್ವೆ ನಂ.205/9ಬಿ ಯ 0.14 ಎಕರೆ ಸ್ಥಿರಾಸ್ತಿಯ ತಮ್ಮ ಮೂಲ ಗೇಣಿ ಹಕ್ಕಿನ ಹದ್ದುಬಸ್ತು ಸರ್ವೇ ನಡೆಸುವಂತೆ ಕೋರಿರುವುದು ಕಂಡು ಬರುತ್ತದೆ.

7. ಈ ಮೇಲೆ ಹೇಳಿದ ಎಲ್ಲಾ ದಾಖಲೆಗಳನ್ನು ಎದುರುದಾರರು ತಮ್ಮ ವರದಿಯೊಡನೆ ಸಲ್ಲಿಸಿರುತ್ತಾರೆ. ಆದರೆ, ದೂರುದಾರರು ತಮ್ಮ ದೂರಿನೊಡನೆ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ದಿ:15/05/2013 ರಂದು ಕುಂದಾಪುರ ತಹಶೀಲ್ದಾರ್ ರವರಿಗೆ ಒಂದು ಅರ್ಜಿಯನ್ನು ನೀಡಿ ಸರ್ವೇ ನಂಬರ್ 205/10ಬಿ ಗೆ ಸಂಬಂಧಿಸಿದಂತೆ ಅಂತಿಮ ದುರಸ್ಥಿಯಾದ ನಂತರ ತಮ್ಮ ಹಕ್ಕಿನ ಜಮೀನಾದ ಸರ್ವೇ ನಂಬರ್ 205/10ಬಿ ಯಲ್ಲಿ 0.08 ಎಕರೆ ಜಮೀನಿರುವುದಾಗಿ ಆರ್‌ಟಿಸಿಯಲ್ಲಿ ದಾಖಲಾಗಿರುತ್ತದೆ. ಕಂಪ್ಯೂಟರ್‌ನಲ್ಲೂ ಸಹ ಸರ್ವೇ ನಂ.205/10ಬಿ ಗೆ ಸಂಬಂಧಿಸಿದಂತೆ 0.08 ಎಕರೆ ವಿಸೀರ್ಣದ ಜಮೀನು ಎಂದು ದಾಖಲಾಗಿರುತ್ತದೆ. ಸರ್ವೇ ನಂಬರ್ 205/10ಎ ಯ ಮತ್ತು ಸರ್ವೇ ನಂಬರ್ 205/10ಬಿ ಯ ಜಮೀನುಗಳಲ್ಲಿ ಪುರಸಭೆಗೆ 0.01.50 ಎಕರೆ ಭೂಸ್ವಾಧೀನವಾಗಿದ್ದು, ಉಳಿಕೆ 8.50 ಸೆಂಟ್ಸ್ (0.08.50 ಎಕರೆ) ಎಂದು ಇರಬೇಕಾಗಿದ್ದ ವಿಸ್ತೀರ್ಣದಲ್ಲಿ ಕೇವಲ 0.08 ಎಕರೆ ತೋರಿಸಿರುವುದನ್ನು ಸರಿಪಡಿಸಿಕೊಡಬೇಕಾಗಿ ಕೋರಿರುವುದು ಕಂಡು ಬರುತ್ತದೆ (ಸದರಿ ಅರ್ಜಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ). ಈ ಅರ್ಜಿಯ ಮೇರೆಗೆ ಆರ್‌ಆರ್‌ಟಿಸಿಆರ್ 211/2009-10ರ ಪ್ರಕರಣದಲ್ಲಿ ಗ್ರಾಮ ಲೆಕ್ಕಿಗರು ದೂರುದಾರರ ಹೇಳಿಕೆಯನ್ನು ಮಾಡಿಕೊಂಡಿದ್ದು, ಅದರಲ್ಲಿ ಸ್ಪಷ್ಟವಾಗಿ ಕುಂದಾಪುರ ಕಸಬ ಗ್ರಾಮದ ಸರ್ವೇ ನಂಬರ್ 205/10ಬಿ ಯಲ್ಲಿನ 0.10 ಎಕರೆ ಜಮೀನಿನಲ್ಲಿ 0.01.50 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿರುವುದಾಗಿ ಹಾಗೂ ಉಳಿಕೆ 0.08.50 ಜಮೀನು ತೋರಿಸುವ ಬದಲು 0.08 ಎಕರೆ ಎಂದು ತೋರಿಸಿರುವುದು ತಪ್ಪಾಗಿರುತ್ತದೆ ಎಂದು ಸದರಿ ಹೇಳಿಕೆಯಲ್ಲಿ ತಿಳಿಸಿರುವುದು ಕಂಡು ಬರುತ್ತದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ತಮ್ಮ ಕುಂದಾಪುರ ಕಸಬ ಗ್ರಾಮದ ಸರ್ವೇನಂಬರ್ 205/10ಬಿ ಜಮೀನಿಗೆ ಸಂಬಂಧಿಸಿದಂತೆ ವಿಸ್ತೀರ್ಣವನ್ನು ಸರಿಪಡಿಸಿಕೊಡುವಂತೆ ಕೋರಿ ತಹಶೀಲ್ದಾರ್, ಕುಂದಾಪುರ ರವರಿಗೆ ಅರ್ಜಿ ಸಲ್ಲಿಸಿದ್ದರು, ಸದರಿ ತಹಶೀಲ್ದಾರ್‌ರವರು ವರದಿಯನ್ನು 205/9ಬಿ ಗೆ ಸಂಬಂಧಿಸಿದ ಜಮೀನಿಗೆ ನೀಡಿರುವುದು ಕಂಡು ಬರುತ್ತದೆ. ಆದ್ದರಿಂದ, ತಹಶೀಲ್ದಾರ್‌ರವರ ಕಛೇರಿಯಲ್ಲಿ ದೂರುದಾರರು ನೀಡಿರುವ ಅರ್ಜಿಗೆ ಸಂಬಂಧಿಸಿದಂತೆ ಎರಡು ಅರ್ಜಿಗಳು ಇದ್ದು (1) 205/9ಬಿ ಗೆ ಸಂಬಂಧಿಸಿದ ಜಮೀನಿಗೆ ಹಾಗೂ (2)

205/10ಬಿ ಜಮೀನಿಗೆ ಸಂಬಂಧಿಸಿದಂತೆ ಅರ್ಜಿಗಳಿದ್ದು, ಈ ಅರ್ಜಿಗಳ ವಿಚಾರದಲ್ಲಿ ಸರಿಯಾಗಿ ವಿಚಾರಣೆಯಾಗದೇ ಸರ್ವೇ ಕಾರ್ಯ ನಡೆಯದೇ ತಹಶೀಲ್ದಾರ್‌ರವರು ತಪ್ಪು ವರದಿಯನ್ನು ಸಲ್ಲಿಸಿರುವುದಾಗಿ ಕಂಡುಬರುತ್ತದೆ.

8. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಕುಂದಾಪುರ ತಾಲ್ಲೂಕಿನ, ಕುಂದಾಪುರ ಕಸಬ ಗ್ರಾಮದ ಸರ್ವೇ ನಂಬರ್:205/10ಬಿ ಗೆ ಸಂಬಂಧಿಸಿದಂತೆ ಸರ್ವೇ ಕಾರ್ಯವನ್ನು ನಿರ್ವಹಿಸಿ ದೂರುದಾರರ ತೊಂದರೆಯನ್ನು ಪರಿಹರಿಸಿಕೊಡುವ ನಿಟ್ಟಿನಲ್ಲಿ ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 13/3/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 10/3/17